### ಅಧ್ಯಾಯ-೫

# ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

ಜಿಲ್ಲೆಯಲ್ಲೇ ಈ ತಾಲೂಕು ಕೈಗಾರಿಕೆಯಲ್ಲಿ ಅತೀ ಹೆಚ್ಚು ಹಿಂದುಳಿದ (೨೦೦೬-೨೦೧೧ರ ಹೊಸ ಕೈಗಾರಿಕಾನೀತಿಯಡಿ ಗುರುತಿಸಿರುವಂತೆ) ತಾಲೂಕಾಗಿದ್ದು, ವಲಯ-I ಕ್ಕೆ ಸೇರಿದೆ. ತಾಲೂಕಿನಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಪೂರಕವಾದ ವಿದ್ಯುತ್, ಸಾರಿಗೆ ಸಂಪರ್ಕ, ಮಾನವ ಸಂಪತ್ತು, ಬ್ಯಾಂಕಿಂಗ್ ವ್ಯವಸ್ಥೆ, ನೀರು, ನೈಸರ್ಗಿಕ ಸಂಪನ್ಮೂಲ ಮತ್ತಿತರ ಅಂಶಗಳಿದ್ದರೂ, ಕೈಗಾರಿಕೆಗಳ ಬೆಳವಣಿಗೆ ಕುಂಠಿತಗೊಂಡಿದೆ. ಹಾಗಾಗಿ ರಾಜ್ಯ ಸರ್ಕಾರ ಇಂತಹ ಪ್ರದೇಶಗಳಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವ ಸಲುವಾಗಿ ಹಲವು ಉತ್ತೇಜನಗಳನ್ನು ಪ್ರಕಟಿಸಿದೆ. ಆ ಕಾರಣ ಇಲ್ಲಿ ಸ್ಥಾಪಿತಗೊಳ್ಳುವ ಸಣ್ಣ ಕೈಗಾರಿಕೆಗಳು, ಬಂಡವಾಳ ಹೂಡಿಕೆ ಸಹಾಯಧನದಲ್ಲಿ ಸ್ಥಿರಾಸ್ತಿ ಮೌಲ್ಯದ ಶೇ.೨೫ರಷ್ಟು ಅಥವಾ ಗರಿಷ್ಠ ಪ್ರತಿ ಘಟಕಕ್ಕೆ ೧೫ ಲಕ್ಷ ರೂ.ಗಳ ಉತ್ತೇಜನ ಪಡೆಯುತ್ತವೆ. ಪರಿಶಿಷ್ಟಜಾತಿ, ಪರಿಶಿಷ್ಠಪಂಗಡ, ಅಂಗವಿಕಲರು, ಅಲ್ಪಸಂಖ್ಯಾತರು, ಮಾಜಿ ಯೋಧರು ಈ ವಲಯದಲ್ಲಿ (ವಲಯ-I ರಲ್ಲಿ) ಉದ್ಯಮಶೀಲರಾಗಿದ್ದಲ್ಲಿ ಸ್ಥಿರಾಸ್ತಿ ಮೌಲ್ಯದ ಶೇ. ೫ರಷ್ಟು ಹೆಚ್ಚುವರಿ ಸಹಾಯಧನ ಅಥವಾ ಗರಿಷ್ಟಮಿತಿ ಪ್ರತಿಘಟಕಕ್ಕೆ ರೂ. ಒಂದು ಲಕ್ಷ ಹೆಚ್ಚುವರಿ ಸಹಾಯಧನ ಸಿಗುತ್ತದೆ. ಮಹಿಳಾ ಉದ್ಯಮಿಗಳಿಗೆ ಗರಿಷ್ಟ ಮಿತಿ ಪ್ರತಿಘಟಕಕ್ಕೆ ರೂ. ೫ ಲಕ್ಷ ಹೆಚ್ಚುವರಿ ಸಹಾಯಧನ ಸಿಗುತ್ತದೆ. ಈ ಉತ್ತೇಜನವು ಕೆ.ಎಸ್.ಎಫ್.ಸಿ., ಕೆ.ಎಸ್.ಐ.ಐ.ಡಿ.ಸಿ. ಬ್ಯಾಂಕು ಹಾಗೂ ಇತರ ಹಣಕಾಸು ಸಂಸ್ಥೆಗಳು ನೆರವು ನೀಡಿದ ಘಟಕಗಳಿಗೆ ಮಾತ್ರ ಲಭ್ಯವಿದೆ. ಈ ವಲಯದಲ್ಲಿ ಸ್ಥಾಪನೆಗೊಳ್ಳುವ ಮೆಗಾ, ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸ್ಟ್ಯಾಂಪ್‌ಡ್ಯೂಟಿ ಮತ್ತು ನೋಂದಣಿ ಶುಲ್ಕದಲ್ಲಿ ಶೇ.೧೦೦ರಷ್ಟು ವಿನಾಯ್ತಿ ದೊರೆಯುತ್ತದೆ. ಮೆಗಾ, ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಶೇ ೧೦೦ ರಷ್ಟು ಭೂಪರಿವರ್ತನಾ ಶುಲ್ಕದ ಮನ್ನಾ ಆಗುತ್ತದೆ ಅಥವಾ ಗರಿಷ್ಠ ಮಿತಿ ಪ್ರತಿಘಟಕಕ್ಕೆ ಕ್ರಮವಾಗಿ ೫೦ ಎಕರೆ, ೨೫ ಎಕರೆ ಹಾಗೂ ೧೦ ಎಕರೆವರೆಗೂ ಇರುತ್ತದೆ. ಕೆ.ಐ.ಎ.ಡಿ.ಬಿ. ಮೂಲಕ ಭೂಮಿಯ ಸ್ವಾಧೀನ ಪಡೆಯುವ ಕೈಗಾರಿಕೆಗಳು ಕೇವಲ ಶೇ.೧೦ರಷ್ಟು ಸ್ವಾಧೀನ ಶುಲ್ಕ ಕಟ್ಟಬೇಕು. ಎಲ್ಲಾ

ವಲಯಗಳಲ್ಲಿ ಎಲ್ಲಾ ವರ್ಗದ ಕೈಗಾರಿಕೆಗಳಿಗೆ ಇ.ಟಿ.ಪಿ.ಯ ವೆಚ್ಚದ ಶೇ.೫೦ರಷ್ಟನ್ನು ಒನ್‌ಟೈಮ್ ಕ್ಯಾಪಿಟಲ್ ಸಹಾಯಧನವಾಗಿ ನೀಡಲಾಗುವುದು. ಗರಿಷ್ಠ ಮಿತಿ ಪ್ರತಿ ಘಟಕಕ್ಕೆ ರೂ. ೧೦೦ ಲಕ್ಷ ಗಳಾಗಿರುತ್ತದೆ. ಯೋಜನೆಯ ಅನುಷ್ಠಾನ ಆರಂಭವಾದ ದಿನಾಂಕದಿಂದ ಪ್ರಾರಂಭಿಕ ಮೂರು ವರ್ಷಗಳ ಅವಧಿಗೆ ಪ್ಲಾಂಟ್–ಮೆಷಿನರಿ ಹಾಗೂ ಕ್ಯಾಪಿಟಲ್ ಗೂಡ್ಸ್‌ಗೆ ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆಯಿಂದ ವಿನಾಯಿತಿ ಸಿಗುತ್ತದೆ. ಈ ಸೌಲಭ್ಯವು ಕಚ್ಚಾ ಪದಾರ್ಥಗಳಿಗೆ, ಇನ್‌ಪುಟ್‌ಗಳಿಗೆ, ಕಾಂಪೋನೆಂಟ್ ಭಾಗಗಳು ಮತ್ತು ಬಳಕೆಯಾಗುವ ವಸ್ತುಗಳಿಗೆ (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) ವಾಣಿಜ್ಯ ಉತ್ಪಾದನೆ ಆರಂಭವಾದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಲಭಿಸುತ್ತದೆ. ಕೃಷಿ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಖರೀದಿಸುವ ಸಂದರ್ಭದಲ್ಲಿ ಎ.ಪಿ.ಎಂ.ಸಿ. ಸೆಸ್‌ನಿಂದ ವಿನಾಯಿತಿ ದೊರೆಯುತ್ತದೆ.

ಪ್ರಸ್ತುತ ಈ ತಾಲೂಕಿನಲ್ಲಿ ಯಾವುದೇ ಮೆಗಾ, ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಲ್ಲ. ತಾಲೂಕಿನಲ್ಲಿ ೧೯೮೪–೮೫ರಲ್ಲಿ ಕೇವಲ ಎರಡು ಸಣ್ಣ ಕೈಗಾರಿಕೆಗಳು ನೋಂದಣಿಗೊಂಡಿದ್ದವು. ೧೯೯೫ರ ಮಾರ್ಚ್ ಅಂತ್ಯಕ್ಕೆ ೫೩ ಸಣ್ಣ ಕೈಗಾರಿಕಾ ಘಟಕಗಳಿದ್ದು, ೧೯೦ ಮಂದಿ ಕಾರ್ಮಿಕರಿದ್ದರು. ೨೦೦೫ರ ಮಾರ್ಚ್ ಅಂತ್ಯಕ್ಕೆ ಎರಡು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಘಟಕಗಳಿದ್ದು, ೧೪ ಮಂದಿ ಕೆಲಸಗಾರರಿದ್ದರು. ಹಾಗೆಯೇ ೭೦ ಕೆಮಿಕಲ್ಸ್ ಘಟಕಗಳಿದ್ದು, ೩೪೪ ಮಂದಿ ಕೆಲಸಗಾರರು; ೧೮೩ ಆಹಾರ ಮತ್ತು ಮಾದಕ ವಸ್ತುಗಳ ಘಟಕ ೪೬೬ ಮಂದಿ ಕೆಲಸಗಾರರು; ೧೬ ಗ್ಲಾಸ್ ಮತ್ತು ಸಿರಾಮಿಕ್ಸ್ ಘಟಕಗಳು ೬೮ ಕೆಲಸಗಾರರಿದ್ದರು. ಹೆಚ್ಚಿನ ವಿವರಗಳಿಗೆ ಕೆಳಗಿನ ಕೋಷ್ಟಕ ನೋಡಿ.

**೨೦೦೨–೨೦೦೩ ರಿಂದ ೨೦೦೮–೨೦೦೯ರ ವರೆಗೆ ಆಯ್ದ ವರ್ಷಗಳಲ್ಲಿ ಹೆಚ್.ಡಿ. ಕೋಟೆ ತಾಲೂಕಿನಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಗಳ ವಿವರ**

**(ಸಂಖ್ಯೆಗಳಲ್ಲಿ)**

| ಕ್ರ.ಸಂ | ವಿವರ | | ೨೦೦೨–೦೩ | ೨೦೦೪–೦೫ | ೨೦೦೫–೦೬ | ೨೦೦೮–೦೯ |
|---|---|---|---|---|---|---|
| ೧. | **ಆಟೋಮೊಬೈಲ್** | **ಸಂಖ್ಯೆ** | ೦ | ೦ | ೦ | ೦ |
| | | **ಕೆಲಸಗಾರರು** | ೦ | ೦ | ೦ | ೦ |
| ೨. | **ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್** | **ಸಂಖ್ಯೆ** | ೦೨ | ೦೨ | ೦೫ | ೦೫ |
| | | **ಕೆಲಸಗಾರರು** | ೧೪ | ೧೪ | ೨೨ | ೨೨ |
| ೩. | **ಕೆಮಿಕಲ್ಸ್** | **ಸಂಖ್ಯೆ** | ೬೮ | ೭೦ | ೭೨ | ೭೩ |
| | | **ಕೆಲಸಗಾರರು** | ೩೪೦ | ೩೪೪ | ೩೫೦ | ೩೫೩ |
| ೪. | **ಫೆರಸ್ ಮತ್ತು ನಾನ್ ಫೆರಸ್** | **ಸಂಖ್ಯೆ** | ೦ | ೦ | – | – |
| | | **ಕೆಲಸಗಾರರು** | ೦ | ೦ | – | – |

| ಕ್ರ.ಸಂ | ವಿವರ | | ೨೦೦೨–೦೩ | ೨೦೦೪–೦೫ | ೨೦೦೫–೦೬ | ೨೦೦೮–೦೯ |
|---|---|---|---|---|---|---|
| ೫. | ಆಹಾರ ಮತ್ತು ಮಾದಕ ವಸ್ತುಗಳು | ಸಂಖ್ಯೆ | ೧೮೩ | ೧೮೩ | ೧೮೭ | ೧೮೯ |
| | | ಕೆಲಸಗಾರರು | ೪೬೬ | ೪೬೬ | ೪೭೬ | ೪೮೭ |
| ೬. | ಗ್ಲಾಸ್ ಮತ್ತು ಸಿರಾಮಿಕ್ಸ್ | ಸಂಖ್ಯೆ | ೧೬ | ೧೬ | ೧೬ | ೧೬ |
| | | ಕೆಲಸಗಾರರು | ೬೮ | ೬೮ | ೬೮ | ೬೮ |
| ೭. | ಜಾಬ್ ವರ್ಕ್ಸ್ ಮತ್ತು ರಿಪೇರಿ | ಸಂಖ್ಯೆ | ೪೨ | ೫೨ | ೫೪ | ೮೨ |
| | | ಕೆಲಸಗಾರರು | ೮೪ | ೧೦೪ | ೧೦೮ | ೧೬೭ |
| ೮. | ಚರ್ಮ | ಸಂಖ್ಯೆ | ೦೮ | ೦೮ | ೦೮ | ೦೮ |
| | | ಕೆಲಸಗಾರರು | ೧೬ | ೧೬ | ೧೬ | ೧೬ |
| ೯. | ಮೆಕ್ಯಾನಿಕಲ್ ಇಂಜಿನಿಯರಿಂಗ್ | ಸಂಖ್ಯೆ | ೨೪ | ೨೫ | ೨೫ | ೨೬ |
| | | ಕೆಲಸಗಾರರು | ೮೨ | ೮೪ | ೮೪ | ೮೯ |
| ೧೦. | ಕಾಗದ ಮತ್ತು ಮುದ್ರಣ | ಸಂಖ್ಯೆ | ೦೬ | ೦೬ | ೦೬ | ೦೭ |
| | | ಕೆಲಸಗಾರರು | ೧೮ | ೧೮ | ೧೮ | ೨೩ |
| ೧೧. | ರಬ್ಬರ್ ಮತ್ತು ಪ್ಲಾಸ್ಟಿಕ್ | ಸಂಖ್ಯೆ | ೦೭ | ೦೭ | ೦೭ | ೦೭ |
| | | ಕೆಲಸಗಾರರು | ೨೪ | ೨೪ | ೨೪ | ೨೪ |
| ೧೨. | ಟೆಕ್ಸ್‌ಟೈಲ್ಸ್ | ಸಂಖ್ಯೆ | ೧೭೩ | ೧೭೬ | ೧೭೯ | ೧೮೦ |
| | | ಕೆಲಸಗಾರರು | ೪೪೬ | ೪೫೨ | ೪೬೧ | ೪೬೫ |
| ೧೩. | ಮರ | ಸಂಖ್ಯೆ | ೧೮೨ | ೧೯೭ | ೨೨೮ | ೨೪೭ |
| | | ಕೆಲಸಗಾರರು | ೪೬೪ | ೪೯೨ | ೫೭೫ | ೬೧೫ |
| ೧೪. | ಇತರೆ | ಸಂಖ್ಯೆ | ೩೭೬ | ೪೪೬ | ೪೬೭ | ೪೭೦ |
| | | ಕೆಲಸಗಾರರು | ೧೭೦೯ | ೧೮೪೬ | ೧೮೭೧ | ೧೮೭೯ |
| ೧೫. | ಒಟ್ಟು | ಸಂಖ್ಯೆ | **೧೦೮೭** | **೧೧೮೮** | **೧೨೫೪** | **೧೩೧೦** |
| | | ಕೆಲಸಗಾರರು | **೩೭೩೧** | **೩೯೨೮** | **೪೦೭೩** | **೪೨೧೨** |

**ಕೆಲಸಗಾರರು :** ತಾಲೂಕಿನಲ್ಲಿ ೨೦೦೧ರ ಜನಗಣತಿಯಂತೆ ೨೪೫೯೩೦ ಜನಸಂಖ್ಯೆಯಿದ್ದು, ೨೩೩೮೮೫ ಮಂದಿ ಗ್ರಾಮೀಣ ಪ್ರದೇಶದಲ್ಲೂ, ಕೇವಲ ೧೨೦೪೫ ಮಂದಿ ನಗರ ಪ್ರದೇಶದಲ್ಲೂ ವಾಸಿಸುತ್ತಿದ್ದರು. ಪ್ರತಿ ಚದರ ಕಿಮೀ.ಗೆ ೧೫೨ ಜನಸಾಂದ್ರತೆಯಿದ್ದು, ೯೭೨ ಲಿಂಗಾನುಪಾತವಿತ್ತು. ತಾಲೂಕಿನಲ್ಲಿ ಒಟ್ಟು ೨೪೫೯೩೦ ಜನಸಂಖ್ಯೆಯಿದ್ದು, ೧೨೫೪೧೩ ಮಂದಿ ಒಟ್ಟು ಕೆಲಸಗಾರರೂ, ೧೦೩೧೭೧ ಮಂದಿ ಮುಖ್ಯ ಕೆಲಸಗಾರರೂ, ೨೨೨೪೨ ಮಂದಿ ಸೀಮಾಂತ (ಅರೆಕಾಲಿಕ) ಕೆಲಸಗಾರರು ಹಾಗೂ ೧೨೦೫೧೭ ಮಂದಿ ಕೆಲಸಗಾರರಲ್ಲದವರು ಇದ್ದರು. ೧೦೩೧೭೧ ಮಂದಿ

ಮುಖ್ಯಕೆಲಸಗಾರರಲ್ಲಿ, ೬೩,೮೧೫ ಮಂದಿ ವ್ಯವಸಾಯಗಾರರಾಗಿಯೂ, ೪೩,೭೯ ಮಂದಿ ಕೃಷಿ ಕಾರ್ಮಿಕರಾಗಿಯೂ, ೧೬,೪೩೯ ಮಂದಿ ಇತರೆ ಕೆಲಸಗಾರರಾಗಿಯೂ ಇದ್ದರು. ೨೨೨೪೨ ಮಂದಿ ಸೀಮಾಂತ (ಮಾರ್ಜಿನಲ್) ಕೆಲಸಗಾರರಲ್ಲಿ ೪೧೩೯ ಮಂದಿ ವ್ಯವಸಾಯಗಾರರಾಗಿಯೂ, ೧೫೪೦೮ ಮಂದಿ ಕೃಷಿ ಕಾರ್ಮಿಕರಾಗಿಯೂ, ೪೨೮ ಮಂದಿ ಗೃಹ ಕೈಗಾರಿಕೆಗಳಲ್ಲಿಯೂ ಹಾಗೂ ೨೨೬೭ ಮಂದಿ ಇತರೆ ಕೆಲಸಗಾರರಾಗಿಯೂ ದುಡಿಯುತ್ತಿದ್ದರು.

**ಉದ್ಯೋಗ :** ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವ್ಯಾಪ್ತಿಗೆ ಸೇರಿರುವ ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಉದ್ಯೋಗಾಕಾಂಕ್ಷಿಗಳು ಉದ್ಯೋಗ ಬಯಸಿ ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡಿದ್ದರು. ೨೦೦೫ರ ಮಾರ್ಚ್ ಅಂತ್ಯಕ್ಕೆ ೧೬೧ ಮಂದಿ ಎಸ್.ಎಸ್.ಎಲ್.ಸಿ. ಗಿಂತ ಕಡಿಮೆ ವಿದ್ಯಾಭ್ಯಾಸ ಮಾಡಿದವರು ನೋಂದಾಯಿಸಿಕೊಂಡಿದ್ದರೆ, ೧೦೦೨ ಮಂದಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿದ್ದವರು, ೨೧೪ ಪಿ.ಯು.ಸಿ. ಉತ್ತೀರ್ಣರಾಗಿದ್ದವರು, ೪೬ ಮಂದಿ ಬಿ.ಎ. ಪದವೀಧರರು, ೧೪ ಮಂದಿ ಬಿ.ಎಸ್ಸಿ ಪದವೀಧರರು, ೧೨ಮಂದಿ ಬಿ.ಕಾಂ ಪದವೀಧರರು ಹಾಗೂ ಒಬ್ಬರು ಬಿ.ಬಿ.ಎಂ., ಪದವೀಧರರು ಉದ್ಯೋಗ ವಿನಿಮಯ ಕಚೇರಿಯಲ್ಲಿ ನೋಂದಾಯಿಸಿಕೊಂಡಿದ್ದರು.

**ರೇಷ್ಮೆ ಉದ್ಯಮ :** ರೇಷ್ಮೆಯು ಗೃಹಕೈಗಾರಿಕೆಗಳಲ್ಲಿ ಒಂದಾಗಿದ್ದು, ವ್ಯವಸಾಯಕ್ಕೆ ಪೂರಕವಾಗಿದೆ. ಗ್ರಾಮೀಣ ಪ್ರದೇಶದ ಕೃಷಿಕರಿಗೆ ಸಾಕಷ್ಟು ಉದ್ಯೋಗಾವಕಾಶ ಒದಗಿಸುವುದರ ಮೂಲಕ ಅವರ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಿದೆ. ೨೦೦೪–೦೫ರಲ್ಲಿ ಈ ತಾಲೂಕಿನಲ್ಲಿ ೮೪.೮೦ ಹೆಕ್ಟೇರರು ಪ್ರದೇಶದಲ್ಲಿ ಹಿಪ್ಪುನೇರಳೆ ಬೇಸಾಯವಿದ್ದು, ೨೦೧ ಮಂದಿ ಈ ಕೃಷಿಯಲ್ಲಿ ತೊಡಗಿದ್ದು ೫೮.೬೫೫ ಟನ್ ರೇಷ್ಮೆಗೂಡು ಉತ್ಪಾದಿಸಲಾಗಿದ್ದು, ಅದರ ಮೌಲ್ಯ ೬೪.೫೨೦ ಲಕ್ಷ ರೂ.ಗಳಾಗಿತ್ತು. ೨೦೦೫–೨೦೦೬ರಲ್ಲಿ ೧೨೦.೩೨ ಹೆಕ್ಟೇರು ಪ್ರದೇಶದಲ್ಲಿ ೨೧೭ ಮಂದಿ ರೈತರು ಹಿಪ್ಪುನೇರಳೆ ಕೃಷಿ ಕೈಗೊಂಡಿದ್ದು, ೧೦೮ ಲಕ್ಷ ರೂ. ಮೌಲ್ಯದ ೮೩.೦೭೪ ಟನ್ ರೇಷ್ಮೆಗೂಡನ್ನು ಉತ್ಪಾದಿಸಲಾಗಿತ್ತು. ತಾಲೂಕಿನಲ್ಲಿ ಎರಡು ತಾಂತ್ರಿಕ ಸೇವಾ ಕೇಂದ್ರಗಳಿದ್ದವು. ೨೦೦೮–೦೯ರ ಸಾಲಿನಲ್ಲಿ ರೇಷ್ಮೆ ಕೃಷಿಯಲ್ಲಿ ೧೫೦ ಕೃಷಿಕರು ತೊಡಗಿದ್ದು, ೭೯.೧೯ ಹೆ. ಜಮೀನು ಹಿಪ್ಪುನೇರಳೆ ಬೆಳಗೆ ಬಳಸಲ್ಪಟ್ಟಿದ್ದು ೫೦.೭೬ ಟನ್ ರೇಷ್ಮೆಗೂಡಿನ ಉತ್ಪಾದನೆಯಾಗಿದ್ದು, ೭೦.೯೯ ಲಕ್ಷ ರೂ. ಮೌಲ್ಯದ ರೇಷ್ಮೆಯನ್ನು ಉತ್ಪಾದಿಸಲಾಗಿತ್ತು.

**ಹೈನು ಉದ್ಯಮ :** ಗ್ರಾಮೀಣ ಜನರ ಆರ್ಥಿಕ ಸ್ಥಾನಮಾನ ಹಾಗೂ ಜೀವನಮಟ್ಟ ಸುಧಾರಣೆಗೆ ಪಶುಸಂಪತ್ತು ಹಿಂದಿನಿಂದಲೂ ಮಹತ್ತರ ಪಾತ್ರ ವಹಿಸುತ್ತಿದೆ. ತಾಲೂಕಿನಲ್ಲಿ ಪಶುಸಂಪತ್ತು ಶ್ರೀಮಂತವಾಗಿದ್ದು, ವ್ಯವಸಾಯ ಮಾಡಲೂ, ಬಾವಿಗಳಿಂದ ನೀರೆತ್ತಲೂ, ದವಸ ಧಾನ್ಯಗಳನ್ನು ಮಾರುಕಟ್ಟೆಗೆ ಸಾಗಿಸಲೂ, ರೈತಾಪಿ ವರ್ಗಕ್ಕೆ ನೆರವಾಗಿದೆ.

ಹೈನುಗಾರಿಕೆಯು ಡೈರಿ ಉದ್ಯಮದ ಸ್ಥಾಪನೆಗೆ ಕಾರಣವಾಗಿದೆ. ಉದ್ಯೋಗ ಸೃಷ್ಟಿಸುವ ಜೊತೆಗೆ ಜನರ ಜೀವನಮಟ್ಟ ಸುಧಾರಿಸಲು ನೆರವಾಗಿದೆ. ತಾಲೂಕಿನಲ್ಲಿ ೨೦೦೧-೦೨ರಲ್ಲಿ ೩೨ ಹಾಲು ಉತ್ಪಾದಕ ಸಂಘಗಳಿದ್ದರೆ, ೨೦೦೪-೦೫ರಲ್ಲಿ ೩೪ ಹಾಲು ಉತ್ಪಾದಕರ ಸಹಕಾರಿ ಸಂಘಗಳಿದ್ದು, ೭೪೦೦ ಮಂದಿ ಸದಸ್ಯರಿದ್ದರೂ, ೨೦೦೨ರ ಜಾನುವಾರು ಗಣತಿಯಂತೆ, ಒಟ್ಟು ೯೮೩೧೭ ದನಕರುಗಳು, ೨೦೧೬ ಎಮ್ಮೆಗಳು, ೧೫೬೬೨ ಕುರಿಗಳು, ೩೪೮೦೮ ಮೇಕೆಗಳು, ೭೫ ಹಂದಿಗಳು, ೧೫೪೩೬ ನಾಯಿಗಳು ಹಾಗೂ ೭೦ ಇತರೆ ಜಾನುವಾರುಗಳು ಸೇರಿ ಒಟ್ಟು ೧,೬೬,೩೮೬ ಜಾನುವಾರುಗಳು ಹಾಗೂ ೯೨,೫೩೪ ಕೋಳಿಗಳಿದ್ದವು. ತಾಲೂಕಿನಲ್ಲಿ ಒಂದು ಪಶುವೈದ್ಯಕೀಯ ಆಸ್ಪತ್ರೆ, ಐದು ಪಶುಚಿಕಿತ್ಸಾಲಯಗಳು, ೧೧ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ಒಂದು ಸಂಚಾರಿ ಚಿಕಿತ್ಸಾಲಯಗಳು, ಒಂದು ಕೃತಕ ಗರ್ಭಧಾರಣ ಕೇಂದ್ರ ಹೀಗೆ ಒಟ್ಟು ೧೯ ಪಶು ವೈದ್ಯ ಶಾಲೆಗಳಿದ್ದು, ಪಶು ಸಂಗೋಪನೆಗೆ ಸಹಕಾರಿಯಾಗಿದೆ. ಇದು ತಾಲೂಕಿನಲ್ಲಿ ಹೈನುಗಾರಿಕೆಗೆ ಪೂರಕವಾಗಿದ್ದು, ಜನರ ಜೀವನಮಟ್ಟ ಸುಧಾರಿಸಲು ನೆರವಾಗಿದೆ. ತಾಲೂಕಿನಲ್ಲಿ ಮೀನುಗಾರಿಕೆಗೂ ವಿಪುಲ ಅವಕಾಶಗಳಿದ್ದು, ೨೦೦೬ರ ಮಾರ್ಚ್ ಅಂತ್ಯಕ್ಕೆ ೧೬೧೯.೫೫ ಮೆಟ್ರಿಕ್ ಟನ್ ಮೀನು ಹಿಡಿಯಲಾಗಿದೆ.

**ಭೂ ಹಿಡುವಳಿ :** ಈ ತಾಲೂಕು ೧,೯೪,೧೩೮ ಹೆ. ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಇದರಲ್ಲಿ ೨೦೦೪-೦೫ರಲ್ಲಾದ ಭೂಬಳಕೆ ಕೆಳಗಿನಂತಿದೆ. ೩೩೦೩೧ ಹೆ. ಅರಣ್ಯ ಪ್ರದೇಶ, ೩೫೫೬೦ ಹೆ. ಸಾಗುವಳಿಗೆ ಲಭ್ಯವಿಲ್ಲದ ಭೂಮಿ, ೫೦೮೧೪ ಹೆ. ಸಾಗುವಳಿ ಮಾಡದಿರುವ ಇತರೆ ಭೂಮಿ, ೧೦೭೬೩ ಹೆ. ಬೀಳುಭೂಮಿ ಹಾಗೂ ೭೦೫೨೧ ಹೆ. ಬಿತ್ತನೆಯಾಗಿರುವ ಪ್ರದೇಶವಿತ್ತು. ೬೩೯೭೦ ಹೆ. ನಿವ್ವಳ ಬಿತ್ತನೆ ಪ್ರದೇಶವಾಗಿದ್ದು, ೬೭೦೩ ಹೆ. ಪ್ರದೇಶ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ಪ್ರದೇಶವಾಗಿತ್ತು. ತಾಲೂಕಿನಲ್ಲಿ ೨೦೦೧ರ ಕೃಷಿಗಣತಿಯಂತೆ ಇದ್ದ ಭೂ ಹಿಡುವಳದಾರರ ಸಂಖ್ಯೆಯನ್ನೂ ಕಂಸದಲ್ಲಿ ವಿಸ್ತೀರ್ಣವನ್ನೂ ಹೆಕ್ಟೇರ್‌ನಲ್ಲಿ ನೀಡಲಾಗಿದೆ. ೧೮೫೭೪ (೯೮೪೪ ಹೆ.) ಮಂದಿ ಅತಿ ಸಣ್ಣ (ಒಂದು ಹೆಕ್ಟೇರ್‌ಗಿಂತ ಕಡಿಮೆ) ಹಿಡುವಳಿದಾರರಿದ್ದರು. ೧೭೧೬೪ (೨೪೨೯೭ ಹೆ.) ಮಂದಿ ಸಣ್ಣ (೧-೨ ಹೆ.) ಹಿಡುವಳಿದಾರರು, ೬೦೯೮ (೧೬೧೬೪ ಹೆ.) ಮಂದಿ ಅರೆಮಧ್ಯಮ (೨-೪ ಹೆ.) ಹಿಡುವಳಿದಾರರು, ೧೫೪೧ (೮೪೧೧ ಹೆ.) ಮಧ್ಯಮ (೪-೧೦ ಹೆ.) ಹಿಡುವಳಿದಾರರು ಹಾಗೂ ೧೩೮ (೧೮೮೭) ಮಂದಿ ದೊಡ್ಡ (೧೦ ಹೆ.ಗಿಂತ ಹೆಚ್ಚು) ಹಿಡುವಳಿದಾರರು, ಹೀಗೆ ಒಟ್ಟು ೪೩೫೦೬ (೬೦೬೦೩ ಹೆ.) ಮಂದಿ ಭೂಹಿಡುವಳಿದಾರರಿದ್ದರು. ಈ ಅಂಕಿಅಂಶಗಳು ತಾಲೂಕಿನಲ್ಲಿ ಚಿಕ್ಕ ಚಿಕ್ಕ ಭೂಹಿಡುವಳಿದಾರರಿರುವುದನ್ನು ಸ್ಪಷ್ಟಪಡಿಸುತ್ತವೆ. ಕೃಷಿಕ ವರ್ಗ ಕ್ರಮೇಣ ಸಮೀಪದ ನಗರಗಳಿಗೆ ಉದ್ಯೋಗ ಅರಸಿ ವಲಸೆ ಹೋಗುತ್ತಿದೆ.

**ನೀರಾವರಿ :** ತಾಲೂಕಿನಲ್ಲಿ ೨೦೦೫-೦೬ರಲ್ಲಿ ೫೧೫೦ ಹೆ. ಕಾಲುವೆಗಳಿಂದಲೂ; ೧೨೨೦ ಹೆ. ಗಳಿಂದಲೂ; ೧೪೭೭ ಹೆ. ಕೆರೆಗಳಿಂದಲೂ; ೧೨೨೩ ಹೆ. ಬಾವಿಗಳಿಂದಲೂ ಹಾಗೂ ೧೫೦ ಹೆ. ಕೊಳವೆ ಬಾವಿಗಳಿಂದಲೂ ನೀರಾವರಿಯಾದ

ನಿವ್ವಳ ಪ್ರದೇಶವಾಗಿದೆ. ಇಲ್ಲಿ ೧೭೧೧೭ ಹೆ. ಪ್ರದೇಶದಲ್ಲಿ ಏಕದಳ ಮತ್ತು ಉಪತೃಣ ಧಾನ್ಯಗಳನ್ನೂ ; ೨೭೬೪೨ ಹೆ. ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನೂ; ೧೮೨೦ ಹೆ. ಪ್ರದೇಶದಲ್ಲಿ ಎಣ್ಣೆಕಾಳುಗಳನ್ನೂ ; ೧೦೮೨ ಹೆ. ಪ್ರದೇಶದಲ್ಲಿ ಹಣ್ಣುಗಳನ್ನೂ; ೨೮೦ ಹೆ. ಪ್ರದೇಶದಲ್ಲಿ ತರಕಾರಿಗಳನ್ನು ೫೨೪ ಹೆ. ಪ್ರದೇಶದಲ್ಲಿ ಕಬ್ಬು; ೧೭೪೦ ಹೆ. ಪ್ರದೇಶದಲ್ಲಿ ತಂಬಾಕು; ೩೪೮೧೬ ಹೆ. ಪ್ರದೇಶದಲ್ಲಿ ಹತ್ತಿ ಮತ್ತಿತರ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ಕೃಷಿಯಾಧಾರಿತ ಕೈಗಾರಿಕೆಗಳನ್ನು ಆರಂಭಿಸಲು ವಿಫುಲ ಅವಕಾಶವಿದೆ.

**ವಿದ್ಯುತ್ :** ತಾಲೂಕಿನಲ್ಲಿ ಉತ್ತಮ ವಿದ್ಯುತ್ ಸೌಲಭ್ಯವಿದ್ದು, ೨೦೦೬ರ ಮಾರ್ಚ್ ಅಂತ್ಯಕ್ಕೆ ೩೪೬೧೫ ಮಂದಿ ಗೃಹಬಳಕೆದಾರರಿದ್ದರು. ೩೪೬ ಮಂದಿ ಕೈಗಾರಿಕಾ ಬಳಕೆದಾರರು, ೧೯೭೦ ಮಂದಿ ವಾಣಿಜ್ಯ ಬಳಕೆದಾರರು, ೪೯೧೨ ನೀರಾವರಿ ಪಂಪುಸೆಟ್ಟು ಹಾಗೂ ೮೨೬ ಬೀದಿದೀಪಗಳಿಗೂ ವಿದ್ಯುತ್ ಪೂರೈಕೆಯಾಗಿತ್ತು. ೫೭.೮೪ ಲಕ್ಷ ಯೂನಿಟ್‌ಗಳನ್ನು ಗೃಹಬಳಕೆಗೆ ಬಳಸಿದರೆ, ೮.೫೫ ಲಕ್ಷ ಯೂನಿಟ್‌ಗಳು ಕೈಗಾರಿಕೆಗೆ ಬಳಕೆಯಾಗಿತ್ತು. ೮.೬೪ ಲಕ್ಷ ಯೂನಿಟ್ ವಾಣಿಜ್ಯಕ್ಕೂ, ೧೪೩.೧೫ ಲಕ್ಷ ಯೂನಿಟ್‌ಗಳು ನೀರಾವರಿ ಪಂಪುಸೆಟ್ಟುಗಳಿಗೂ; ೩೯.೨೦ ಇತರೆ ಉದ್ದೇಶಗಳಿಗೂ ಹೀಗೆ ಒಟ್ಟು ೨೫೭.೩೮ ಲಕ್ಷ ಯೂನಿಟ್‌ಗಳನ್ನು ವಿವಿಧ ಉದ್ದೇಶಗಳಿಗೆ ಬಳಸಲಾಗಿತ್ತು. ಇದರಿಂದ ೬೭೬.೧೨ ಲಕ್ಷ ಆದಾಯ ಬಂದಿತ್ತು. ೨೦೦೯ರ ಮಾಹಿತಿಗೆ ಅನುಬಂಧ–II ನೋಡಿ.

**ಬಡತನ ನಿರ್ಮೂಲನೆ :** ತಾಲೂಕಿನಲ್ಲಿ ಬಡತನ ನಿರ್ಮೂಲನೆಗಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಸ್ವರ್ಣಜಯಂತಿ ಗ್ರಾಮ ಸಮೃದ್ಧಿ ಯೋಜನೆಯಡಿಯಲ್ಲಿ ೧೨ ವೈಯಕ್ತಿಕ ಹಾಗೂ ೨೭೫ ಗುಂಪುಗಳು ಪ್ರಯೋಜನ ಪಡೆದಿವೆ. ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಲ್ಲಿ ೧೨೬೭.೪೦ ಟನ್ ಆಹಾರ ಧಾನ್ಯಗಳನ್ನು ಉಪಯೋಗಿಸಲಾಗಿದೆ. ೨.೯೧ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. ಆಶ್ರಯ ಯೋಜನೆಯಲ್ಲಿ ೩೪೩ಮನೆಗಳನ್ನು ಕಟ್ಟಿ ವಿತರಿಸಲಾಗಿದೆ. ೧೩೦ ಮನೆಗಳನ್ನು ಡಾ.ಅಂಬೇಡ್ಕರ್ ಯೋಜನೆಯಡಿಯಲ್ಲೂ; ೪೦೬ ಮನೆಗಳನ್ನು ಇಂದಿರಾ ಆವಾಸ್ ಯೋಜನೆಯಡಿಯಲ್ಲೂ ನಿರ್ಮಿಸಿಕೊಡಲಾಗಿದೆ. ಹಾಗೆಯೇ ೨೦೦೫–೦೬ರಲ್ಲಿ ಸ್ವರ್ಣಜಯಂತಿ ಗ್ರಾಮ ಸಮೃದ್ಧಿ ಯೋಜನೆಯಲ್ಲಿ ಆರು ವೈಯಕ್ತಿಕ, ೨೭೪ ಗುಂಪುಗಳು ಪ್ರಯೋಜನ ಪಡೆದಿದ್ದರು. ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಲ್ಲಿ ೭೭೭.೩೯ ಟನ್ ಆಹಾರ ಧಾನ್ಯಗಳನ್ನು ಬಳಸಿ, ೧೮೯೬ ಲಕ್ಷ ಮಾನವ ದಿನಗಳನ್ನು ಸೃಷ್ಟಿಯಾಗಿದೆ. ೬೧೦ ಮನೆಗಳನ್ನು ಇಂದಿರಾ ಅವಾಶ್ ಯೋಜನೆಯಡಿ ಕಟ್ಟಿ ವಿತರಿಸಲಾಗಿದೆ. ತಾಲೂಕಿನಲ್ಲಿ ೩೫೬ ಸ್ತ್ರೀ ಶಕ್ತಿ ಸಂಘಗಳಿದ್ದು, ೬೦೦೮ ಮಂದಿ ಸದಸ್ಯರಿದ್ದರು. ಈ ಸಂಘಗಳು ಒಟ್ಟು ೧೧೧.೩೩ ಲಕ್ಷ ರೂ. ಉಳಿತಾಯ ಮಾಡಿವೆ.

**ಕೈಗಾರಿಕಾಭಿವೃದ್ಧಿಯ ಸಾಧ್ಯತೆಗಳು :** ತಾಲೂಕಿನಲ್ಲಿ ೨೦೦೨ರ ಜಾನುವಾರು ಗಣತಿಯಂತೆ ೯೮೩೧೭ ದನಕರುಗಳು, ೨೦೧೬ ಎಮ್ಮೆಗಳು, ೧೫೬೬೨ ಕುರಿಗಳು, ३४೮೦೮ ಮೇಕೆಗಳು, ೭೫ ಹಂದಿಗಳು ಮತ್ತಿತರ ಒಟ್ಟು ೧೬೬೩೮೬ ಜಾನುವಾರುಗಳಿವೆ. ೯೨೫೩೪ ಕೋಳಿಗಳಿವೆ. ಆದಕಾರಣ ಚರ್ಮೋದ್ಯಮದ ಬೆಳವಣಿಗೆಗೆ ಅವಕಾಶವಿದೆ. ಉತ್ತಮ ಗುಣಮಟ್ಟದ ಚಪ್ಪಲಿ, ಚರ್ಮದ ಸೂಟ್‌ಕೇಸು, ಔಷಧಿ ಕಿಟ್ಟು, ಆಕರ್ಷಣೆಯ ಕೈಚೀಲ ಮೊದಲಾದವುಗಳನ್ನು ತಯಾರಿಸಲು ಪ್ರೋತ್ಸಾಹಿಸುವುದರ ಮೂಲಕ ಚರ್ಮೋದ್ಯಮವನ್ನು ಲಾಭದಾಯಕ ಉದ್ಯಮವಾಗಿ ಮಾಡಲು ಅವಕಾಶವಿದೆ. ತಾಲೂಕಿನಲ್ಲಿ ದೊಡ್ಡ ಹಾಗೂ ಸಣ್ಣಪುಟ್ಟ ಕೆರೆಕಟ್ಟೆಗಳು, ಕಬಿನಿ, ತಾರಕಾ, ನುಗು ಹಾಗೂ ಹೆಬ್ಬಳ್ಳ ಜಲಾಶಯಗಳು ಮೀನುಗಾರಿಕೆಗೆ ಲಭ್ಯವಿರುವುದರಿಂದ ಮೀನುಗಾರಿಕೆ ಅಭಿವೃದ್ಧಿಗೆ ವಿಫುಲ ಅವಕಾಶವಿದೆ.

ವ್ಯವಸಾಯೋಪಕರಣ, ಕಾಮಗಾರಿ ಉಪಕರಣ, ಸಮ್ಮಿಶ್ರರಸಗೊಬ್ಬರ, ಇಟ್ಟಿಗೆ ತಯಾರಿಕೆ, ಅಕ್ಕಿಗಿರಣಿ ಮುಂತಾದ ಕೈಗಾರಿಕೆಗಳಿಗೆ ತಾಲೂಕಿನಲ್ಲಿ ಹೆಚ್ಚಿನ ಅವಕಾಶವಿದೆ. ತಾಲೂಕಿನ ಗೃಹ ಕೈಗಾರಿಕಾ ಘಟಕಗಳು ಸಾಂಪ್ರದಾಯಿಕ ವಿಧಾನದಲ್ಲಿ ವ್ಯವಸಾಯೋಪಕರಣಗಳನ್ನು ಹಾಗೂ ಕಾಮಗಾರಿ ಉಪಕರಣಗಳನ್ನು ತಯಾರಿಸುತ್ತಿವೆ. ಇವುಗಳ ಜೊತೆಗೆ ಆಧುನಿಕ ಘಟಕಗಳನ್ನು ಸ್ಥಾಪಿಸಿ ಸುಧಾರಿಸಿದ ಉಪಕರಣಗಳಾದ ಕಬ್ಬಿಣದ ನೇಗಿಲು, ಕಳೆತೆಗೆಯುವ ಯಂತ್ರ, ಮುಸುಕಿನ ಜೋಳ, ರಾಗಿ, ಭತ್ತವನ್ನು ಬಡಿದು ವಿಂಗಡಿಸುವ ಯಂತ್ರ ಮೊದಲಾದವುಗಳನ್ನು ತಯಾರಿಸುವುದರಿಂದ ಇವುಗಳಿಗೆ ಉತ್ತಮ ಬೇಡಿಕೆಯುಂಟಾಗುತ್ತದೆ. ರಾಸಾಯನಿಕ ಗೊಬ್ಬರದ ಬೇಡಿಕೆಯನ್ನು ಪೂರೈಸಲು ತಾಲೂಕಿನಲ್ಲಿ ಒಂದೆರಡು ಸಣ್ಣ ಪ್ರಮಾಣದ ರಾಸಾಯನಿಕ ಕಾರ್ಖಾನೆಗಳನ್ನು ಸ್ಥಾಪಿಸಲು ಅವಕಾಶವಿದೆ. ಬೇಡಿಕೆ ಆಧಾರಿತ ಉದ್ದಿಮೆಗಳಾದ ಅಗರಬತ್ತಿ ತಯಾರಿಕೆ, ಸಿದ್ಧಉಡುಪು ತಯಾರಿಕೆ, ರೇಷ್ಮೆ ಹುಳುಗಳ ಸಾಕಾಣಿಕೆ, ವಾಹನಗಳ ರಿಪೇರಿ, ನಯಗೊಳಿಸಿದ ಗ್ರಾನೈಟ್ ಟೈಲ್ಸ್, ಹಣ್ಣುಗಳ ಶೈತಲೀಕರಣ, ಸಣ್ಣಪ್ರಮಾಣದ ಹಿಟ್ಟಿನ ಗಿರಣಿ, ಪಶು ಮತ್ತು ಕೋಳಿ ಆಹಾರ ತಯಾರಿಕಾ ಘಟಕಗಳು, ಐಸ್‌ಕ್ರೀಮ್ ತಯಾರಿಕೆ, ಪೀಠೋಪಕರಣಗಳ ತಯಾರಿಕೆ, ರೇಷ್ಮೆಗೂಡಿನಿಂದ ರೇಷ್ಮೆ ತೆಗೆಯುವ ಹಾಗೂ ರೇಷ್ಮೆ ನೂಲು ತಯಾರಿಕಾ ಘಟಕಗಳ ಸ್ಥಾಪನೆಗೆ ತಾಲೂಕಿನಲ್ಲಿ ಹೆಚ್ಚಿನ ಸಾಧ್ಯತೆಗಳಿವೆ.

* * * *